ವಯಸ್ಕರ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವ ಮೊತ್ತ

1402 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು): ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ "ವಯಸ್ಕರ ಶಿಕ್ಷಣಕ್ಕಾಗಿ" ಖರ್ಚು ಮಾಡುತ್ತಾ ಇರುವ ಮೊತ್ತವೆಷ್ಟು?

ಆ) ಮೇಲ್ಕಂಡ "ವಯಸ್ಕರ ಶಿಕ್ಷಣಕ್ಕಾಗಿ" ಕೇಂದ್ರ ಸರ್ಕಾರದಿಂದ ಪಡೆಯುತ್ತಿರುವ ಅನುದಾನದ ಮೊತ್ತವೆಷ್ಟು?

ಇ) "ವಯಸ್ಕರ ಶಿಕ್ಷಣದ" ಇಲಾಖೆಯ ಸಿಬ್ಬಂದಿ ಹಾಗೂ ಆಡಳಿತ ನಿರ್ವಹಣೆಗಾಗಿ ಖರ್ಚು ಮಾಡುತ್ತಿರುವ ವಾರ್ಷಿಕ ಮೊತ್ತವೆಷ್ಟು?

ಈ) "ವಯಸ್ಕರ ಶಿಕ್ಷಣದಿಂದ" ಯಾವ ಪ್ರಯೋಜನವೂ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ವಯಸ್ಕರ ಶಿಕ್ಷಣವನ್ನು ರದ್ದುಗೊಳಿಸಿ ಅದಕ್ಕಾಗಿ ಖರ್ಚಾಗಿರುವ ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ರೂ. 11,62,87,000-00

ಆ) ರೂ. 09,07,58,000-00

ಇ) ರೂ. 65,13,000-00

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು.

1406 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಶಾಲಾ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಗಳೇನು(ಪ್ರಾಥಮಿಕ, ಮಾಧ್ಯಮಿಕ ಪ್ರೌಢಶಾಲೆಗಳು ಮತ್ತು ಕಾಲೇಜುಗಳು)?

ಆ) ಸದರಿ ಕಟ್ಟಡಗಳನ್ನು ಕಟ್ಟಲು ಮಂಜೂರಾದ ಹಣವೆಷ್ಟು?

ಇ) ಈಗ ಖರ್ಚಾಗಿರುವ ಹಣವೆಷ್ಟು?

ಈ) ಮೊಳಕಾಲ್ಮೂರುನಲ್ಲಿರುವ ಪ್ರಥಮ ದರ್ಜೆ ಕಾಲೇಜು ಕಟ್ಟಡವನ್ನು ಕಟ್ಟಲು ಸರ್ಕಾರದ ಉದ್ದೇಶವಿದೆಯೇ?

ಉ) ಹಾಗಿದ್ದಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು?

ಊ) ಉಳಿದ ಶಾಲಾ ಕಾಲೇಜುಗಳ ಕಟ್ಟಡ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳು:

ಚಿತ್ರದುರ್ಗ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದು ಈ ಕೆಳಕಂಡ ಕಾರ್ಯಕ್ರಮಗಳ ಮೂಲಕ ಅವುಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.

1) ಕೆಳಗೆ ತಿಳಿಸಿರುವ ಆರ್ಥಿಕ ಸೌಲಭ್ಯಗಳಿಂದ ಪ್ರಾಥಮಿಕ ಶಾಲಾ ಕಟ್ಟಡವನ್ನು ನಿರ್ಮಿಸಲಾಗುವುದು.

ಎ) ಕಪ್ಪು ಹಲಗೆ ಯೋಜನೆ - 435 ಕೊಠಡಿಗಳು.

ಬಿ) 9ನೇ ಹಣಕಾಸು ಆಯೋಗದಿಂದ - 184 ಕೊಠಡಿಗಳು.

ಸಿ) ಗಡಿ ಪ್ರದೇಶ ಅಭಿವೃದ್ಧಿಯೋಜನೆಯಿಂದ - 5 ಪ್ರಾಥಮಿಕ ಶಾಲೆಗಳು.

ಡಿ) ರಾಜ್ಯದ ವಲಯದಿಂದ

ಇ) ಜಿಲ್ಲಾ ಪರಿಷತ್ತಿನಿಂದ

ಹೈಸ್ಕೂಲು ಮತ್ತು ಕಾಲೇಜು ಕಟ್ಟಡಗಳ ಕಾರ್ಯವನ್ನು ರಾಜ್ಯವಲಯ ಯೋಜನೆಯಡಿಯಲ್ಲಿ ಆಯವ್ಯಯವನ್ನು ಆಧರಿಸಿ ತೆಗೆದುಕೊಳ್ಳಲಾಗಿದೆ.

ಪ್ರಾಥಮಿಕಶಾಲೆ

1990-91ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಲು ಮಂಜೂರಾದ ಹಣದ ವಿವರ ಈ ಕೆಳಕಂಡಂತಿದೆ:

	ರೂ. ಲಕ್ಷಗಳಲ್ಲಿ
1) ಜಿಲ್ಲಾ ಪರಿಷತ್ತು, ಚಿತ್ರದುರ್ಗ	4.39
2) 9ನೇ ಹಣಕಾಸು ಆಯೋಗ	55.00
3) ಕಪ್ಪು ಹಲಗೆ ಯೋಜನೆ (ಮಂಜೂರಾಗಬೇಕಾಗಿದೆ)	149.75
4) ಗಡಿ ಅಭಿವೃದ್ಧಿ ಯೋಜನೆ	3.50

ಪ್ರೌಢಶಾಲೆ

	ರೂ.ಲಕ್ಷಗಳಲ್ಲಿ
1990-91ನೇ ಸಾಲಿನಲ್ಲಿ ಹೈಸ್ಕೂಲ್ ಕಟ್ಟಡ ನಿರ್ಮಾಣಕ್ಕಾಗಿ.	10.00
ಗಡಿ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ	4.50

ಕಿರಿಯ ಕಾಲೇಜು

ಪದವಿ ಪೂರ್ವ ಕಾಲೇಜುಗಳ ನಿರ್ಮಾಣಕ್ಕೆ	1.00

ಪ್ರಥಮ ದರ್ಜೆ ಕಾಲೇಜು

1990-91ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆಗಳ ಕಟ್ಟಡಗಳಿಗೆ ಸಂಬಂಧಿಸಿದಂತೆ ಆರ್ಥಿಕ ದುಃಸ್ಥಿತಿಯ ಕಾರಣ ಯಾವುದೇ ಹಣವನ್ನು ಒದಗಿಸಿರುವುದಿಲ್ಲ.

ಒಟ್ಟು ಮೊತ್ತ	15.50

ಇ) ಪ್ರಾಥಮಿಕ ಶಾಲೆಗಳು

9ನೇ ಹಣಕಾಸು ಆಯೋಗದಲ್ಲಿ	8.30
ಕಪ್ಪು ಹಲಗೆ ಯೋಜನೆಯಲ್ಲಿ	87.09
	95.39

ಪ್ರೌಢಶಾಲೆಗಳು 2.84

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇಲ್ಲ

98.23

ಈ) ಇದೆ.

ಉ) ಭೂ ಸ್ವಾಧೀನಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. 1991-92ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಿಲ್ಲ. ಭೂಸ್ವಾಧೀನ ಪ್ರಕರಣ ಮುಗಿದನಂತರ ಕಟ್ಟಡಕ್ಕೆ ಹಣ ಒದಗಿಸುವ ವಿಷಯವನ್ನು ಒಟ್ಟಾರೆ ಉಳಿತಾಯದಿಂದ ಭರಿಸಲು ಪರಿಶೀಲಿಸಲಾಗುವುದು.

ಊ) ಆರ್ಥಿಕ ಅನುಕೂಲತೆಯನ್ನು ಧರಿಸಿದೆ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಪ್ರೈಮರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು.

1182 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವರ್ಷ ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ ನರ್ಸರಿ ಮತ್ತು ಪ್ರೈಮರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರಿ ಶಾಲೆಗಳಲ್ಲಿ ಬೋಧನೆಯ ಕ್ರಮವನ್ನು ಉತ್ತಮಗೊಳಿಸಲು ಸರ್ಕಾರದ ಮುಂದೆ ಯಾವುದಾದರೂ ಕಾರ್ಯಕ್ರಮಗಳಿವೆಯೇ?

ಇ) ಇದ್ದಲ್ಲಿ, ಆ ಕಾರ್ಯಕ್ರಮಗಳು ಯಾವುವು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪುಟ್ಟನಪುರ ಗ್ರಾಮದಲ್ಲಿರುವ ಸರ್ಕಾರಿ ಕಾಲುವೆ ದಾರಿ ಕುರಿತು

1407 - ಶ್ರೀ ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಪುಟ್ಟನಪುರ ಗ್ರಾಮದಲ್ಲಿರುವ ಸರ್ವೆ ನಂ: 6,7,8 ಮತ್ತು 9 ರಲ್ಲಿರುವ ಕಾಲುವೆ ದಾರಿ ದಾಖಲೆಗಳ ಪ್ರಕಾರ ಸರ್ಕಾರಕ್ಕೆ ಸೇರಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ಸರ್ಕಾರಿ ಕಾಲುವೆ ದಾರಿಯನ್ನು ಖಾಸಗಿ ವ್ಯಕ್ತಿಯೊಬ್ಬರು ಕಂದಾಯ ಇಲಾಖೆಯ ಅಧಿಕಾರಿಗಳೊಡನೆ ಶಾಮೀಲಾಗಿ ಬೇಲಿ ಹಾಕಿಕೊಂಡು ಈ ಸರ್ಕಾರಿ ಜಮೀನು ತಮ್ಮದೆಂದು ಹೇಳಿ ಚಾಮರಾಜನಗರ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹಕ್ಕು ಸಾಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರ ಕೂಡಲೇ ಈ ಸರ್ಕಾರಿ ಕಾಲುವೆದಾರಿಯನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ?

ಈ) ಈ ರೀತಿ ಸರ್ಕಾರಿ ಕಾಲುವೆ ದಾರಿಯಲ್ಲಿ ಖಾಸಗಿ ವ್ಯಕ್ತಿಗಳಿಗೆ ಬೇಲಿ ಹಾಕಲು ಸಹಾಯಕರಾದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.